747(1330) ಶ್ರೀ. ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ರಾಜ್ಯದಲ್ಲಿ ನಡೆಸಲಾಗುತ್ತಿರುವ ಸರ್ಕಾರಿ ಕೈಗಾಗಿಕಾ ತರಬೇತಿ ಕೇಂದ್ರಗಳಲ್ಲಿ ಕಿರಿಯ ತರಬೇತಿ ಅಧಿಕಾರಿಗಳ ಕೊರತೆ ಇರುವುದು ಸರ್ಕಾರಕ್ಕೆ ತಿಳಿದಿದೆಯೇ ;

ಆ) ಈ ಹಿನ್ನೆಲೆಯಲ್ಲಿ ಪರ್ಯಾಯವಾಗಿ ಹಲವಾರು ವರ್ಷಗಳಿಂದ ಅತಿಥಿ ಬೋಧಕರುಗಳ ಸೇವೆಯನ್ನು ಪಡೆಯಲಾಗುತ್ತಿದ್ದು, ಪ್ರತಿ ವರ್ಷವೂ ಇವರುಗಳ ಸೇವೆಯನ್ನು ಮುಂದುವರೆಸಿಕೊಂಡು ಬರಲಾಗುತ್ತಿರುವುದು ನಿಜವೇ ;

ಇ) ಹಾಗಿದ್ದಲ್ಲಿ ಪ್ರಸಕ್ತ ಸಾಲಿನಲ್ಲಿ ಎಷ್ಟು ಮಂದಿ ಅತಿಥಿ ಬೋಧಕರುಗಳ ಸೇವೆಯನ್ನು ಇಲಾಖೆಯು ಮುಂದುವರೆಸಿರುತ್ತದೆ ;

ಈ) ಈ ಅತಿಥಿ ಬೋದಕರುಗಳು ಖಾಲಿ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆಯೇ ;

ಉ) ಸೇವಾ ಭದ್ರತೆ ಇಲ್ಲದೆ ಹಲವಾರು ವರ್ಷಗಳಿಂದ ಸೇವೆ ಸಲ್ಲಿಸಿಕೊಂಡು ಬಂದಿರುವ ಅತಿಥಿ ಬೋಧಕರುಗಳಿಗೆ ಕ್ರೋಢಿಕೃತ ವೇತನ ನೀಡುವ ಬಗ್ಗೆ ಪರಿಗಣಿಸಲಾಗುವುದೇ. ಈ ನಿಟ್ಟಿನಲ್ಲಿ ಇರುವರೆಗೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ತನ್ವೀರ್ ಸೇಠ್ (ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) :

ಅ) ತಿಳಿದಿದೆ.

ಆ) ಇಲ್ಲ. ಅತಿಥಿ ಬೋಧಕರುಗಳ ಸೇವೆಯನ್ನು ಮುಂದುವರಿಸಿರುವುದಿಲ್ಲ. ಅವಶ್ಯಕತೆಗನುಗುಣವಾಗಿ ಪ್ರತಿ ವರ್ಷ ಅತಿಥಿ ಬೋಧಕರನ್ನು ಆಹ್ವಾನಿಸಲಾಗುತ್ತಿದೆ.

ಇ) ಅತಿಥಿ ಬೋಧಕರುಗಳ ಸೇವೆಯನ್ನು ಮುಂದುವರಿಸಿರುವುದಿಲ್ಲ. ಆದರೆ ಪ್ರಸಕ್ತ ಸಾಲಿನಲ್ಲಿ 92 ಅತಿಥಿ ಬೋಧಕರುಗಳನ್ನು ಆಹ್ವಾನಿಸಲಾಗಿದೆ.

ಈ) ಖಾಲಿ ಹುದ್ದೆಗಳು ಇಲ್ಲದಿದ್ದರೂ ಹೆಚ್ಚುವರಿ ವೃತ್ತಿ ಘಟಕಗಳನ್ನು ಅನುಷ್ಠಾನಗೊಳಿಸಿದಾಗ ಹಾಗೂ ಕಿರಿಯ ತರಬೇತಿ ಅಧಿಕಾರಿಗಳನ್ನು ತರಬೇತಿ ನಿಯೋಜಿಸಿದಾಗ ಅತಿಥಿ ಬೋಧಕರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ.

ಉ) ಇಲ್ಲ

748(1051) ಶ್ರೀ ಜೀವರಾಜ್.ಡಿ.ಎನ್.(ಶೃಂಗೇರಿ) : ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಶೃಂಗೇರಿ ಮತ ಕ್ಷೇತ್ರ ವ್ಯಾಪ್ತಿಯ ಕಮ್ಮರಡಿ ಮಾವಿನಕಟ್ಟೆ–ಬೇಗಾರು ಹಾಗೂ ನಾರ್ವೆ–ಎತ್ತಿನಹಟ್ಟಿ–ಅಗಳಗುಂಡಿ ರಸ್ತೆಗೆ ಲೆಕ್ಕ ಶೀರ್ಷಿಕೆ 3054 ಬಾಬಿನಡಿಯಲ್ಲಿ ಈ ಹಿಂದೆ ಟೆಂಡರ್ ಕರೆಯಲಾಗಿದೆಯೇ :

ಆ) ಕಾಮಗಾರಿಗಳನ್ನು ಇನ್ನೂ ಪ್ರಾರಂಭಿಸದಿರಲು ಕಾರಣವೇನು :

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) :

ಅ) 2003–2004ನೇ ಸಾಲಿನಲ್ಲಿ ಟೆಂಡರ್ ಕರೆಯಲಾಗಿದೆ.

ಆ) ಲೆಕ್ಕ ಶೀಷಿಕೆ 3054(ಯೋಜನೇತರ) ವನ್ನು ಈ ಸಾಲಿನಲ್ಲಿ ಕೈಬಿಟ್ಟಿದ್ದರಿಂದ ಹಾಗೂ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ನಿಧಿಯಡಿಯಲ್ಲಿ ಅನುದಾನ